**ದಿನಾಂಕಃ 18-09-2024 ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಕೆ ಎಸ್ ಆರ್ ಐ ವಕೀಲರಿಂದಃ**

ನಮಗೂ ಹಾಗೂ ಪ್ರತಿವಾದಿಯರಿಗೂ ಶೌಚಾಲಯಕ್ಕೆ ಹೋಗುವ ದಾರಿಯ ವಿಷಯಕ್ಕೆ ವ್ಯಾಜ್ಯ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಎ ಷೆಡ್ಯೂಲ್ ಸ್ವತ್ತಿನ ಖಾತಾ ನಂಬರ್ 313/257 ಪೂರ್ವ ಪಶ್ಚಿಮಃ 15 ಮುಕ್ಕಾಲು ಅಡಿ ಹಾಗೂ ಉತ್ತರ ದಕ್ಷಿಣಃ 68 ಅಡಿ ಎಂದರೆ ಸರಿ. ಮೇಲೆ ಹೇಳಿರುವ ಶೌಚಾಲಯವು ಎ ಷೆಡ್ಯೂಲ್ ಸ್ವತ್ತಿನ ಅಳತೆ ಒಳಗೆ ಬರುವುದಿಲ್ಲ. ಸದರಿ ಎ ಷೆಡ್ಯೂಲ್ ಸ್ವತ್ತಿನ ಉತ್ತರ ದಿಕ್ಕಿಗೆ ಎರಡನೇ ಮಹಲಿಂಗಪ್ಪನವರ ಹಿಸ್ಸೆ ಹಾಗೂ ದಕ್ಷಿಣ ದಿಕ್ಕಿಗೆ ನಮ್ಮದು ಬರುತ್ತದೆ. ನಂಜಪ್ಪ ಹಾಗೂ ಮಹಲಿಂಗಪ್ಪರವರು ಭಾಗ ಮಾಡಿಕೊಂಡಿರುವುದಕ್ಕೆ 1983 ನೇ ಇಸವಿಯಲ್ಲಿ ಪತ್ರ ಮಾಡಿಕೊಂಡಿರುತ್ತಾರೆ. ಸದರಿ ಮಹಲಿಂಗಪ್ಪನವರು ಮಾಡಿಕೊಂಡಿರುವಂತಹ ಖಾತೆಯ ಹೊಸ ಸಂಖ್ಯೆ 314/258 ಹಾಗೂ ಹಳೆ ಖಾತೆ ಸಂಖ್ಯೆ 931/933 ಪೂರ್ವ ಪಶ್ಚಿಮಃ 17 ಅಡಿ ಹಾಗೂ ಉತ್ತರ ದಕ್ಷಿಣಃ 53.5 ಅಡಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾರಿ ಸೇರಿಸಿಕೊಂಡು ಖಾತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮೇಲೆ ಹೇಳಿರುವ ಹಾಗೆ 1983 ರಲ್ಲಿ ನನ್ನ ತಂದೆ ಹಾಗೂ ಮಹಲಿಂಗಪ್ಪನವರು ಮಾಡಿಕೊಂಡಂತಹ ಪಾಲು ಪಟ್ಟಿಯಲ್ಲಿ ಮಹಲಿಂಗಪ್ಪನವರ ಅಳತೆಯು ಎಷ್ಟು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಪಾಲು ಪಟ್ಟಿಯನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಅದರಲ್ಲಿ ಅಳತೆಯು ನಮೂದಾಗಿರುತ್ತದೆ. ನಿಪಿ-2 ರ ಪ್ರಕಾರ "ತಿಪಟೂರು ಮುನ್ಸಿಪಲ್ ಖಾತೆ" ಅದನ್ನು ಸಾಕ್ಷಿಯು ನೋಡಿ ಐಟಂ ನಂಬರ್ 4 ಸ್ವತ್ತನ್ನು ನೋಡಿ ಗುರುತಿಸಿದ್ದು, ಅದು ನಮ್ಮದೇ ಸ್ವತ್ತು ಎಂದು ಹೇಳಿರುತ್ತಾರೆ. ಸದರಿ ನಿಪಿ-2 ರಲ್ಲಿ ಉತ್ತರಕ್ಕೆಃ 2 ನೇ ಮಹಲಿಂಗಪ್ಪನವರ ಹಿಸ್ಸೆ ಎಂದು ಬರೆದಿರುತ್ತಾರೆ. ಅದು ಸರಿಯಾಗಿರುತ್ತದೆ. ನಾನು ಹೇಳಿರುವ ದಾರಿಯ ವಿಷಯವು ಪಾಲುಪಟ್ಟಿಯಲ್ಲಿ ನಿಪಿ-2 ರ ಹಿಂಭಾಗದಲ್ಲಿ ಬರೆದಿರುತ್ತಾರೆ. ಸದರಿ ನಿಪಿ-2 ರ ಪ್ರಕಾರ ವಾದಿ ಹಾಗೂ ಮಹಲಿಂಗಪ್ಪನವರು ಉಪಯೋಗಿಸಿಕೊಳ್ಳುವುಕ್ಕೆ 3 ಅಡಿ ಜಾಗವನ್ನು ಬಿಟ್ಟಿರುವುದಾಗಿ ನಮೂದಾಗಿರುತ್ತದೆ. ಮಹಲಿಂಗಪ್ಪನವರಿಗೆ ಖಾತೆ ಆಗಿರುವ ಪ್ರಕಾರ ಉತ್ತರ ದಕ್ಷಿಣಃ 53.5 ಅಡಿ ಒಳಗಡೆ ದಾರಿ ಬರುತ್ತದೆ. ಸದರಿ ಖಾತೆಯು ಸರಿಯಿಲ್ಲ ಎಂದು ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಸದರಿ ಉತ್ತರ ದಕ್ಷಿಣಃ 53.5 ಅಡಿಯನ್ನು ಅಳತೆ ಮಾಡಿದರೆ ಅದು ನಂಜಪ್ಪ ಹಾಗೂ ಮಹಲಿಂಗಪ್ಪನವರ ಜಂಟಿ ಗೋಡೆಯವರೆಗೆ ಬರುತ್ತದೆ ಎಂದರೆ ಸರಿ. ಸದರಿ ಮಹಲಿಂಗಪ್ಪನವರು ತೀರಿಕೊಂಡ ಬಳಿಕ, ಅವರ ಪತ್ನಿ ಹಾಗೂ ಮಕ್ಕಳು ಎಲ್ಲರೂ ಸೇರಿ 1 ನೇ ಪ್ರತಿವಾದಿಯವರಿಗೆ ದಿಃ 31.12.2012 ರಂದು ನೋಂದಾಯಿತ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ನಾನು ನೋಡಿರುವುದಿಲ್ಲ ಎನ್ನುತ್ತಾರೆ. ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸಿದ ನಂತರ ಅದರಲ್ಲಿ ಏನು ಬರೆದಿದ್ದಾರೆ ಎಂಬುದನ್ನು ಕ್ರಯ ಪತ್ರದಲ್ಲಿ ನಾನು ನೋಡಿರುತ್ತೇನೆ. ಸದರಿ ಕ್ರಯಪತ್ರದಲ್ಲಿ ದಕ್ಷಿಣ

ಭಾಗಕ್ಕೆ ಮಹಲಿಂಗಪ್ಪ ಹಾಗೂ ನಂಜಪ್ಪನ ಜಂಟಿ ಗೋಡೆ ಎಂದು ಬರೆದಿರುತ್ತಾರೆ ಎಂಬುದು ನಿಜ. ಪಶ್ಚಿಮದ ದಿಕ್ಕು ರೇವಣ್ಣ ಸಿದ್ದಪ್ಪನವರ ಮನೆ ಹಾಗೂ ನಿವೇಶನ ಎಂದು ಇರುತ್ತದೆ ಅದೂ ಸಹ ಸರಿ. ಸದರಿ ರೇವಣ್ಣಸಿದ್ದಪ್ಪನವರ ಮನೆಯವರೆಗೂ ಅಳತೆ ಮಾಡಿದರೆ ಪೂರ್ವ ಪಶ್ಚಿಮಃ 17 ಅಡಿ ಬರುತ್ತದೆ ಎಂದರೆ ನಮ್ಮ ದಾರಿನು ಸೇರಿ ಬರುತ್ತದೆ ಎಂದರೆ ಸರಿ. ನಾನು ಸಲ್ಲಿಸಿರುವ ದಾವಾ ಪತ್ರದಲ್ಲಿ ಎ ಷೆಡ್ಯೂಲ್ ಸ್ವತ್ತಿನ ಪಶ್ಚಿಮ ದಿಕ್ಕಿಗೆ ರೇವಣ್ಣ ಸಿದ್ದಪ್ಪನವರ ಸ್ವತ್ತು ಬರುತ್ತದೆ ಎಂದರೆ ಸರಿ. ನಾನು ಹೇಳುವ ಪ್ರಕಾರ ದಾರಿ ಹಾಗೂ ಶೌಚಾಲಯವು 1 ನೇ ಪ್ರತಿವಾದಿಯರು ಬರೆದುಕೊಟ್ಟಿರುವಂತಹ ವಿಸ್ತೀರ್ಣಕ್ಕೆ ಬರುತ್ತದೆ. ಮಹಲಿಂಗಪ್ಪನವರು ಇದ್ದಿದ್ದ ಪೂರ್ವ ಪಶ್ಚಿಮ 17 ಅಡಿ ಹಾಗೂ ಉತ್ತರ ದಕ್ಷಿಣ 53.5 ಅಡಿ 1 ನೇ ಪ್ರತಿವಾದಿಗೆ ಕ್ರಯ ಮಾಡಿಕೊಟ್ಟ ನಂತರ ಅಷ್ಟೇ ಅಳತೆಯಂತೆ ಅವರಿಗೂ ಖಾತೆ ಆಗಿರುತ್ತದೆ ಎಂದರೆ ಸರಿ. ಸದರಿ ಅಳತೆಯ ಮೇಲೆ ತಪ್ಪು ಎಂದು ನಾವು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಮಹಲಿಂಗಪ್ಪನವರ ಹೆಂಡತಿ ಹಾಗೂ ಮಕ್ಕಳು 1 ನೇ ಪ್ರತಿವಾದಿಯವರಿಗೆ ಮೋಸದಿಂದ ಕ್ರಯ ಮಾಡಿಸಿಕೊಂಡಿದ್ದಾರೆ ಎಂದು ಇದೇ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿದೆ ಎಂದರೆ ಸರಿ. ಆದಕಾರಣಕ್ಕೆ ಮಹಲಿಂಗಪ್ಪನವರ ಪತ್ನಿ ಹಾಗೂ ಮಕ್ಕಳು ನನ್ನ ಕಡೆಯಿಂದ ಒಂದು ದಾವೆಯನ್ನು ಹಾಕಿಸಿದರೆ ಬಲ ಇರುತ್ತದೆ ಎಂಬ ಕಾರಣಕ್ಕೆ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸೇರಿದಂತಹ ಯಾವುದೇ ದಾರಿ ಹಾಗೂ ಶೌಚಾಲಯ ಇಲ್ಲ ಎಂದರೆ ಸರಿಯಲ್ಲ. ನಮಗೂ ಹಾಗೂ ಮಹಲಿಂಗಪ್ಪನವರಿಗೆ ಆದಂತಹ ಪಾಲಿನಲ್ಲಿ ನಂಜಪ್ಪ ಹಾಗೂ ಮಹಲಿಂಗಪ್ಪನವರ ಜಂಟಿ ಗೋಡೆಯವರೆಗೂ ಅದು 1 ನೇ ಪ್ರತಿವಾದಿಯದ್ದು ಆಗಿರುತ್ತದೆ ಎಂದರೆ ಸರಿಯಲ್ಲ. ಮಹಲಿಂಗಪ್ಪ ಹಾಗೂ ಚಂದ್ರಮ್ಮ 1 ನೇ ಪ್ರತಿವಾದಿ ಸರಿಯಾದ ಅಳತೆಯಲ್ಲಿ ಖಾತೆ ಆಗಿರುತ್ತದೆ. ನನಗೆ ಸದರಿ ಆಸ್ತಿಯಲ್ಲಿ ಯಾವುದೇ ದಾರಿ ಹಾಗೂ ಶೌಚಾಲಯ ಇಲ್ಲದಿದ್ದರೂ ಸುಳ್ಳು ಸಂಖ್ಯೆಯನ್ನು ಹೂಡಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಸಹಿ/-
ಅಧಿಕ ಸಿವಿಲ್ ನ್ಯಾಯಾಧೀಶರು,
ತಿಪಟೂರು.